

# ರಾಧಿಕಾ ಆತಂಕ

‘ಪ್ಯಾಡ್‌ಮ್ಯಾನ್’ ಚಿತ್ರದ ನಟನೆಯ ಮೂಲಕ ವಿಮರ್ಶಕರು ಮತ್ತು ಸಾಮಾನ್ಯ ಚಿತ್ರಪ್ರೇಕ್ಷಕರ ಮೆಚ್ಚುಗೆ ಪಡೆದ ರಾಧಿಕಾ ಆಪ್ಟೆ, ಈಗ ಬಿಡುಗಡೆಯಾಗಿರುವ ‘ಅಂಧಾಧುನ್’ ಚಿತ್ರದಲ್ಲೂ ಅತ್ಯುತ್ತಮ ನಟನೆ ಪ್ರದರ್ಶಿಸಿದ್ದಾರೆ. ಚಿತ್ರದ ಕಲೆಕ್ಷನ್ ಕೂಡಾ ಚೆನ್ನಾಗಿದೆ ಎನ್ನುವ ವರದಿಗಳಿವೆ. ಈ ತಿಂಗಳಲ್ಲೇ ರಾಧಿಕಾ ನಟಿಸಿರುವ ‘ಬಾಜಾರ್’ ಚಿತ್ರ ಕೂಡಾ ಬಿಡುಗಡೆ ಕಾಣಲಿದೆ. ತಮಿಳು ಚಿತ್ರ ‘ಉಲಾ’ದಲ್ಲೂ ರಾಧಿಕಾ ನಾಯಕಿ. ಈ ಮಧ್ಯೆ ಶೂಟ್ ದಿ ಪಿಯಾನೊ ಪ್ಲೇಯರ್ ಚಿತ್ರಕ್ಕೂ ಸಹಿ ಹಾಕಿ ಆಗಿದೆ.

ಇಷ್ಟೆಲ್ಲದರ ಮಧ್ಯೆಯೂ ಸಿನಿಮಾರಂಗದಲ್ಲಿ ಅವಕಾಶಗಳ ಬಗ್ಗೆ ರಾಧಿಕಾಗೆ ಆತಂಕ ತಪ್ಪಿಲ್ಲ. ‘ಒಂದೆರಡು ಯಶಸ್ವೀ ಚಿತ್ರಗಳನ್ನು ಕೊಟ್ಟರೂ ಅದನ್ನೇ ನಂಬಿ ಕೂರುವಂತಿಲ್ಲ. ಇಲ್ಲಿ ಸ್ಪರ್ಧೆ ಬಿಗುವಾಗಿದೆ. ಒಳ್ಳೆಯ ಪಾತ್ರಗಳು ಸಿಗುತ್ತವೋ ಎಲ್ಲವೋ ಎಂಬ ಆತಂಕ ನನ್ನಂಥವರಿಗೆ ನಿರಂತರ ಕಾಡುತ್ತದೆ’ ಎಂದಿದ್ದಾಳೆ ರಾಧಿಕಾ.

ಅದೂ ನಿಜವೇ. ಬಾಲಿವುಡ್‌ನಲ್ಲಿ ಪ್ರತಿಭೆಗಿಂತ ಹೆಚ್ಚಾಗಿ ಫ್ಯಾಷನಬಲ್ ಆಗಿರುವ ನಟಿಯರಿಗೇ ದೊಡ್ಡ ಬ್ಯಾನರ್‌ಗಳು ಮತ್ತು ಸೂಪರ್‌ಸ್ಟಾರ್‌ಗಳ ಮಣೆ ಹಾಕುವ ಪ್ರವೃತ್ತಿ ಹಿಂದಿನಿಂದಲೂ ಇದೆ. ಸೆಪ್ಟೆಂಬರ್ 7 ರಂದು ಜನ್ಮದಿನ ಆಚರಿಸಿದ 33ರ ಹರೆಯದ ಈ ಸುಂದರಿ, ಈವರೆಗಿನ ಮಟ್ಟಕ್ಕೆ ಏರಿದ್ದೂ ಸಾಕಷ್ಟು ಕಷ್ಟನಷ್ಟಗಳನ್ನು ದಾಟಿಯೇ. ಆದರೆ ಈಗ ವೃತ್ತಿಜೀವನದ ಉತ್ತುಂಗದಲ್ಲಿ ಇರುವುದರಿಂದ ಉತ್ತಮ ಅವಕಾಶಗಳನ್ನು ನಿರೀಕ್ಷಿಸುವುದು ಸಹಜವೇ.





# ಅಮೀರ್ ಖಾನ್ ಸಂಭ್ರಮ

ಅಮಿತಾಭ್ ಬಚ್ಚನ್ ಮತ್ತು ಅಮೀರ್ ಖಾನ್ ಬಾಲಿವುಡ್‌ನ ಇಬ್ಬರು ದೈತ್ಯ ಪ್ರತಿಭೆಗಳು ಎನ್ನುವುದರಲ್ಲಿ ದೂಸ್ರಾ ಮಾತಿಲ್ಲ. ಅಮಿತಾಭ್ ಮತ್ತು ಅಮೀರ್ ಜತೆಯಾಗಿ ಮೊದಲ ಬಾರಿಗೆ ನಟಿಸಿರುವ ‘ಥಗ್ ಆಫ್ ಹಿಂದೂಸ್ತಾನ್’ ದೀಪಾವಳಿ ಹಬ್ಬದ ಹೊತ್ತಿಗೆ ತೆರೆಗೆ ಬರಲು ಸಿದ್ಧತೆ ನಡೆದಿದೆ. ದೈತ್ಯ ಪ್ರತಿಭೆಗಳ ಈ ಮಹಾಸಂಗಮದ ಸಿನಿಮಾದಲ್ಲಿ ಹಡಗು ಮತ್ತು ಸಮುದ್ರ ಮುಖ್ಯ ಹಿನ್ನೆಲೆಯಾಗಿದೆಯಂತೆ. ಕೋಟಿಗಟ್ಟಳೆ ರೂಪಾಯಿ ಖರ್ಚು ಮಾಡಿ ಎರಡು ಹಡಗುಗಳನ್ನು ತಯಾರಿಸಿ ಶೂಟಿಂಗ್ ನಡೆಸಿರುವ ನಿರ್ದೇಶಕ ವಿಜಯಕೃಷ್ಣ ಆಚಾರ್ಯ, ಭಾರತದ ಚಿತ್ರರಂಗದ ಇತಿಹಾಸದಲ್ಲೇ ಹಿಂದೆಂದೂ ಕಂಡರಿಯದಂತಹ ದೃಶ್ಯಗಳನ್ನು ಕಟ್ಟಿಕೊಟ್ಟಿದ್ದಾರಂತೆ.

‘ನಾನು ಅಮಿತಾಭ್‌ಜೀ ಅಭಿಮಾನಿ. ಅವರ ಮುಂದೆ ನಿಂತು ಮೊದಲ ಬಾರಿಗೆ ನಟಿಸುವಾಗ ಡೈಲಾಗ್ ತೊದಲಿದ್ದು ನಿಜ. ಅವರ ಜತೆಗೆ ನಟಿಸುತ್ತಿದ್ದೇನೆ ಅನ್ನುವುದೇ ನನಗೊಂದು ಸಂಭ್ರಮವಾಗಿತ್ತು’ ಎಂದು ಅಮೀರ್ ಶೂಟಿಂಗ್‌ನ ಕ್ಷಣಗಳನ್ನು ನೆನಪಿಸಿಕೊಳ್ಳುತ್ತಾರೆ. ಹಾಗೆ ನೋಡಿದರೆ ಈ ಇಬ್ಬರು ದೈತ್ಯರನ್ನು ಒಟ್ಟುಗೂಡಿಸಿ ರಿಷ್ತಾ ಎನ್ನುವ ಸಿನಿಮಾ ನಿರ್ದೇಶಿಸಲು ಇಂದ್ರಕುಮಾರ್ ಕೆಲವು ವರ್ಷಗಳ ಹಿಂದೆಯೇ ನಿರ್ಧರಿಸಿದ್ದರು. ಆದರೆ ಅದ್ಯಾಕೋ ಆ ಸಿನಿಮಾ ಮುಂದುವರಿಯಲಿಲ್ಲ.

ಈಗ ‘ಥಗ್ಸ್ ಆಫ್ ಹಿಂದೂಸ್ತಾನ್’ ಚಿತ್ರ ಸಿದ್ಧವಾಗಿದೆ. ಈ ಚಿತ್ರದ ಕೊನೆಯಲ್ಲಿ ಅಮೀರ್ ಮತ್ತು ಅಮಿತಾಭ್ ಇಬ್ಬರ ಪಾತ್ರಗಳೂ ಸಾವನ್ನಪ್ಪುತ್ತವೆ ಎನ್ನುವ ವರದಿಗಳಿವೆ. ಸಾಮಾನ್ಯವಾಗಿ ಹೀರೋಗಳು ಸಿನಿಮಾದಲ್ಲಿ ಸಾಯುವುದಿಲ್ಲ. ಆದರೆ ಅದ್ಯಾಕೋ ಇಬ್ಬರಿಗೂ ಈ ಪಾತ್ರಗಳಲ್ಲಿ ಸಾಯವುದೇ ಹೆಚ್ಚು ಸರಿ ಅನ್ನಿಸಿದೆಯಂತೆ!

ಅಮೀರ್ ಖಾನ್ ಮುಂದಿನ ಚಿತ್ರ ಹಾಲಿವುಡ್‌ನ ಆಸ್ಕರ್ ಪ್ರಶಸ್ತಿ ವಿಜೇತ ಫಾರೆಸ್ಟ್ ಗಂಪ್‌ನ ಹಿಂದಿ ರಿಮೇಕ್ ಎಂಬ ಸುದ್ದಿ ಹಬ್ಬಿದೆ. ಈ ಮಧ್ಯೆ ಓಶೋ ರಜನೀಶ್ ಪಾತ್ರವನ್ನು ಮುಖ್ಯವಾಗಿಟ್ಟುಕೊಂಡು ಅಮೀರ್ ನಟಿಸುವ ಮಾತುಗಳೂ ಕೇಳಿಬಂದಿದ್ದವು. ಆದರೆ ಸದ್ಯಕ್ಕೆ ಓಶೋ ಸುದ್ದಿಯಿಲ್ಲ. ಆದರೆ ‘ಫಾರೆಸ್ಟ್ ಗಂಪ್’ ಹಿಂದಿಗೆ ಬರುವುದು ಖಚಿತವಾಗಿದೆ.

■ ಬಿಂದು